ಮಳೆಯಿಂದ ರಕ್ಷಿಸಲು ಮನೆ, ಮನೆಯ ರಕ್ಷಣೆಗಿನ್ನೊಂದು ಕವಚ. ನಾ ಕಟ್ಟಿಸಿದ ಮನೆ, ಎಂತಹ ಹುಚ್ಚು ಹೊಳೆ ಮಳೆಗೂ ಬಗ್ಗೋದಿಲ್ಲ ಎಂದು ಎದೆ ತಟ್ಟಿ ಹೇಳಬಲ್ಲ ಒಬ್ಬ ಮೇಸ್ತ್ರೀನೂ ಈ ಜಾಗದಲ್ಲಿನ್ನೂ ಹುಟ್ಟಿಲ್ಲ. ಎಷ್ಟೇ ಜತನದಿಂದ ಕಟ್ಟಿದರೂ ಎಲ್ಲೋ ಒಂದೆಡೆ ಮನೆ ಸೋರದಿದ್ದರೆ, ಮಲೆನಾಡಿನ ಮುಂಗಾರಿಗೇ ಅವಮಾನ. ಹಳೆಯ ಮನೆಗಳ ಗತಿಯಂತೂ ದೇವರಿಗೇ ಪ್ರೀತಿ. ಅಡುಗೆ ಮನೇಲಿರೋ ಪಾತ್ರೆಗಳಿಗೆಲ್ಲಾ ಮನೆಯೊಳಗೆ ಸೋರೋ ನೀರು ಹಿಡಿಯೋ ಕೆಲಸ. ಎಷ್ಟೇ ಶ್ರದ್ಧೆವಹಿಸಿ ಪಾತ್ರೆಗಳನ್ನಿಟ್ಟರೂ, ಎಲ್ಲೋ ಒಂದು ಕಡೆ ಸೋರಿ, ಮನೆಯೆಲ್ಲಾ ನೀರಾಗುತ್ತೆ. ಥಂಡಿಯಾಗಿ ಶೀತ ಕೆಮ್ಮು ನೆಗಡಿ ಖಾಯಂ. ಒಡೆದು ಉರಿಯೋ ಪಾದಕ್ಕೆ ಇಂಬಳದ ಉಪಚಾರ.

ಇದೇನಪ್ಪಾ, ಮಲೆನಾಡಿನ ಮುಂಗಾರಿನ ರಗಳೆ ರೇಜಿಗೆಗಳ ಪಟ್ಟಿ ಮುಗಿಯುತ್ತಲೇ ಇಲ್ಲವಲ್ಲ! ಎಂದುಕೊಳ್ಳಬೇಡಿ. ಮುಂಗಾರಿನ ರಸಾನುಭೂತಿಯ ನವಿರು ನವಿಲಿನ ಕೇಕೇನ ಕೇಳೋಣ ಬನ್ನಿ. ಏನೇ ಮಾಡಿದರೂ ಸಮಾಧಾನಗೊಳ್ಳದ ಮಗುವಿನ ರಚ್ಚೆಗಟ್ಟಿದ ಅಳುವಿನಂತೆ ಧಾರಾಕಾರವಾಗಿ ಸುರಿಯೋ ಮಳೇನ ಕಣ್ತುಂಬಿಕೊಳ್ಳುತ್ತಾ, ಹಲಸಿನ ಹಪ್ಪಳದೊಡನೆ ಬಿಸಿಯಾದ ತಾಜಾ ಕಾಫಿ ಕಪ್‌ನೊಡನೆ ಕುಳಿತರೆ ಜೀರುಂಡೆಯ ಜೀಕಾರದ, ಕಪ್ಪೆಯ ಗುಟುರುವಿಕೆಯ ಹಿಮ್ಮೇಳ. ಅಂದ ಹಾಗೆ ಮಲೆನಾಡಿನ ಪ್ರತಿ ಮನೆಯಲ್ಲೂ ದಿನದ ಇಪ್ಪತ್ತನಾಲ್ಕು ಗಂಟೆಯೂ ಕಾಫಿಯು ಹಂಡೆಗಳಲ್ಲಿ ಕುದಿಯುತ್ತಲೇ ಇರುತ್ತದೆ ಎಂದು ನಾನೆಂದರೆ, ಅತಿ ಉತ್ಪ್ರೇಕ್ಷೆ ಏನಲ್ಲ! ಕಾರ್ಮೋಡ ಕರಗಿದ ಮೇಲೆ ಸಣ್ಣಗೆ ಜಿನುಗೋ ಹೂಮಳೆಯ ತುಂತುರು ಹನಿಗಳು ನಿದ್ದೆಯ ಕಂದನ ಮರುಳು ನಗೆಯಂತೆ ತಂಪಾಗಿರುತ್ತದೆ. ಮುತ್ತು ಪೋಣಿಸಿದಂತಹ ಸೋನೆಮಳೆ ಮಗುವಿನ ಮುದ್ದಾದ ಚಿಗುರು ಹಲ್ಲುಗಳಂತೆ ಹೊಳಪಾಗಿರುತ್ತದೆ. ಎಲ್ಲಾ ಕಿಟಕಿ ಬಾಗಿಲುಗಳನ್ನು ಮುಚ್ಚಿದ್ದರೂ ಮೂಳೆ ಕೊರೆಯೋ ಚಳೀನ ಬಚ್ಚಲು ಹಂಡೆಯ ಬೆಂಕಿಯ ಮುಂದೆ ಕುಳಿತು ಹಲ್ಲನ್ನು ಕಟಕಟಿಸುತ್ತಾ ಕಾಸಿಕೊಳ್ಳೋದೇ ಸ್ವರ್ಗ ಸುಖ. ನಾಲ್ಕಾರು ಕಾಳು ಮೆಣಸನ್ನು ಜಜ್ಜಿಹಾಕಿದ ಹಬೆಯಾಡೋ ಸಾರು ಮಳೆಗಾಲದ ಮೃಷ್ಟಾನ್ನ. ಜೊತೆಗೆ ನಂಚಿಕೊಳ್ಳಲು ಮಳೆಗಾಲಕ್ಕೆಂದೇ ಕಾಪಿಟ್ಟ ದಿಂಡಿನಕಾಯಿ, ಸಂಡಿಗೆ ಮೆಣಸು. ಸಂಜೆಯಾಗುತ್ತಿದ್ದಂತೆ ಹುಸಿಮುನಿಸುಗಳೊಡನೆ ಸಾಗೋ ಚನ್ನೆಮಣೆ, ಪಗಡೆಯಾಟ.

ಗೌರಿಹಬ್ಬಕ್ಕೆಂದು ತಯಾರಾಗುವ ಹದಿನಾರೆಳೆ ಗೆಜ್ಜೆವಸ್ತ್ರ. ಗಾಳಿಯ ರಭಸಕ್ಕೋ, ಸಿಡಿಲಿನ ಆರ್ಭಟಕ್ಕೋ ಮಗುಚಿ ಬೀಳೋ ಮರಗಳಿಂದ ಕರೆಂಟ್ ಇಲ್ಲದ ರಾತ್ರಿಗಳು. ಚಿಮಿಣಿ, ಕ್ಯಾಂಡಲ್‌ಗಳೆದುರು ಕುಳಿತು ಅಮ್ಮ ಹೇಳೋ ಕತೆಗಳು ಅವಳು ಕೊಡೋ ಕೈ ತುತ್ತಿನಷ್ಟೇ ಸ್ವಾದಿಷ್ಟ. ಭೋರ್ಗರೆವ ಮಳೆಯ ಏಕತಾನತೆಯ ನೀರವ ರಾತ್ರಿಯಲ್ಲಿ, ಅಮ್ಮನ ಕತೆಗಳಾಳಕ್ಕಿಳಿದಾಗ, ತಟ್ಟನೇ ಬಂದೆರಗಿದ ಕಿವಿ ಬಿರಿಯುವ ಗುಡುಗಿಗೆ ಎಲ್ಲರೂ ಒಮ್ಮೆಲೇ ಕುಮ್ಮುಟ್ಟಿ ಬೀಳುವ ಮಜ ಅನುಭವಿಸಿಯೇ ತೀರಬೇಕು. ಬಾನು ಭುವಿಗಳ ನಡುವಿನ ವಿದ್ಯುತ್ರೇಖೆಯಂತಹ ಸಿಡಿಲ ಸೇತುವೆ ಬಳಿಯಲ್ಲೇ ಸರಿದಾಡಿದಾಗ ಧನಂಜಯನ ಜಪಿಸೋದಲ್ಲದೇ ಮತ್ತೇನು ಮಾಡಲು ಸಾಧ್ಯ? ಅಟ್ಟದ ಮೇಲೆ ಕಂಬಳಿಯೊಳಗೆ ತೂರಿ ಸುರಿವ ವರ್ಷಧಾರೆಯ ಲಾಲಿಹಾಡಿನೊಡನೆ ಬರುವ ಕುಂಭಕರ್ಣನ ನಿದ್ದೆ. ಆಲಿಕಲ್ಲು ಬಿದ್ದಾಗ ಮಳೆಯಲ್ಲಿ ನಡುಗುತ್ತಾ ಹೋಗಿ ಅವುಗಳನ್ನು ಆಯ್ದುಕೊಳ್ಳೋ ಸಡಗರ. ಭೂಮಿಯನ್ನು ತಬ್ಬಿದ ಕಾರ್ಮೋಡದ ದೆಸೆಯಿಂದ ಅರ್ಧ ಫರ್ಲಾಂಗ್ ದೂರವೂ ಕಾಣದಾದ ರಸ್ತೆಯಲ್ಲಿ ಹಗಲಲ್ಲೇ ಹೆಡ್‌ಲೈಟ್ ಹೊತ್ತಿಸಿಕೊಂಡು ಮೋಡವನ್ನೇ ಸೀಳಿಕೊಂಡು ಆಮೆಯಂತೆ ಸಾಗೋ ಬಸ್ ಪಯಣ.

ಮಳೆಗಾಲದಲ್ಲಿ ಶಾಲೆಗೆ ಹೋಗೋ ಗಮ್ಮತ್ತೇ ಬೇರೆ. ಪುಸ್ತಕಗಳು ಒದ್ದೆ ಆಗಬಾರದೆಂದು ಎಷ್ಟೇ ಜತನದಿಂದ ಕೊಡೆ ಹಿಡಿದರೂ ಮಳೆಯಲ್ಲಿ ತೊಯ್ಯುವ ತಮ್ಮ ಚಪಲವನ್ನು ತೀರಿಸಿಕೊಳ್ಳೋ ಪುಸ್ತಕಗಳು. ಮೈ ಮುಖಕ್ಕೆಲ್ಲಾ ರಾಚುವ ಮಳೆ ಚಳಿ ಗುಳ್ಳೆಗಳನ್ನು ಎಬ್ಬಿಸುತ್ತದೆ. ಯೂನಿಫಾರಂ ಎಲ್ಲಾ ಒದ್ದೆ ಮುದ್ದೆ. ಕೊಡೆಯನ್ನೇ ಮಗುಚಿ ಹಾಕೋ ರುಮು ರುಮು ಬೀಸುವ ಗಾಳಿ. ಶಾಲೆಯ ನೆಲವೆಲ್ಲಾ ಕಾಲಿನಿಂದ ತೋಯ್ದ ನೀರಿಂದ ಕೆಸರುಮಯ. ಒಬ್ಬರಿಗೊಬ್ಬರು ಸರಿದು ಕೂರುತ್ತಾ ಬೆಚ್ಚಗಾಗುವ ಪ್ರಯತ್ನ. ಮೈಕ್‌ನ ಗಂಟಲೊಡನೆ ಹುಟ್ಟಿದ ಮಾಸ್ಟರ್ ಆದರೆ ಪರವಾಗಿಲ್ಲ. ಮೆಲುದನಿಯ ಮಾಸ್ಟರ್‌ಗಳ ಪರದಾಟವಂತೂ ಹೇಳಿ ಮುಗಿಯೋದಲ್ಲ. ಮುಂಗಾರಿನ ಆರ್ಭಟದೊಳಗೆ ಕರಗಿ ಹೋಗೋ ಪಾಠಗಳಿಂದ ಹಿಂದಿನ ಬೆಂಚಿನ ಮಕ್ಕಳಿಗೆ ತಮ್ಮ ಕನಸಿನ ಲೋಕಕ್ಕೆ ತೆರಳೋ ಪರವಾನಗಿ ತಾನಾಗೇ ದಕ್ಕುತ್ತದೆ. ಸಂಜೆ ಮನೆಗೆ ಮರಳುವಾಗ ಮಳೆ ನಿಂತಿದ್ದರೆ, ಮಾರ್ಗದ ಪಕ್ಕದಲ್ಲಿ ಹರಿಯೋ ನೀರಲ್ಲಿ ಕಾಲಾಡಿಸುತ್ತಾ, ಕುಪ್ಪಳಿಸುತ್ತಾ ಸಾಗಬಹುದು. ಚರಂಡಿ ನೀರಲ್ಲಿ ಕಾಗದದ ದೋಣಿ ಬಿಟ್ಟು ಅವುಗಳ ರಭಸದೋಟದೊಡನೆ ರೇಸ್ ಮಾಡಬಹುದು. ಮಳೆಗಾಲದಲ್ಲಷ್ಟೇ ಪ್ರತ್ಯಕ್ಷವಾಗೋ ಕೀಟಗಳ ಜಾಡು ಹಿಡಿದು ಹೋಗಬಹುದು. ಹಠಮಾರಿ ಚಂಡಿಯಂತೆ ನಿಲ್ಲಲೊಲ್ಲದೇ ಅಹರ್ನಿಶಿ ಅಪ್ಪಳಿಸುವ ಜಡಿಮಳೆಯಿಂದ ಅನೇಕ ಹಳ್ಳಿಗಳು ದ್ವೀಪಗಳಾಗಿ, ನೆರೆ ಬಂದು ಅನಿರೀಕ್ಷಿತವಾಗಿ ದೊರಕುವ ರಜೆಯ ಮಜ ಸವಿಯಬಹುದು.

ಮುಂಗಾರು ಅನ್ನದಾತನ ಚೈತನ್ಯದ ಚಟುವಟಿಕೆಯ ಕಾಲ. ಮಳೆ ರೈತನ ಪಾಲಿನ ದೇವರ ಕೃಪೆಯ ಪ್ರತಿರೂಪ. ಪ್ರತಿ ನಕ್ಷತ್ರದಲ್ಲೂ ಬಯಸಿದಂತೆ ಮಳೆಯಾದರೆ, ರೈತನ ಉತ್ಸಾಹ ನೂರ್ಮಡಿಯಾಗುತ್ತದೆ. ಆರಿದ್ರಾ ಬಂದರೆ ದಾರಿದ್ರ್ಯ ಹೋದೀತು: ಅಸಲೆ (ಆಶ್ಲೇಷ) ಮಳೆ ಕೈ ತುಂಬಾ ಬೆಳೆ ಇವು ಜೀವನಾನುಭವದ ಗಾದೆಗಳು. ಚಳಿ, ಗಾಳಿ ಮಳೆಗಳೊಡನೆ ಕಂಬಳಿಕೊಪ್ಪೆ ಹೊದ್ದುಕೊಂಡು, ಗದ್ದೆಯನ್ನು ಹೂಡಬೇಕು. ಬತ್ತದ ಸಸಿಗಳನ್ನು ಕಿತ್ತು ಸೂಡಿ ಮಾಡಿ ನಟ್ಟಿ ಗದ್ದೆಗಳಲ್ಲಿ ನೆಡಬೇಕು. ಗೊಬ್ಬರ, ನೀರು ಹದವರಿತು ಹರಿಸಬೇಕು. ಕಣ್ಣು ಹಾಯಿಸಿದುದ್ದಕ್ಕೂ ತಿಳಿ ಎಳೆ ಹಸಿರಿನ ವಿಶಾಲ ವಾರಿಧಿಯಂತಹ ನೋಟ. ಗಾಳಿ ಬಂದಾಗ ಕಡಲ ತೆರೆಗಳಂತೆ ತೂಗೋ ಸಸಿಗಳನ್ನು ಕಣ್ ತುಂಬಿಕೊಂಡರೆ ದಿನ ನಿತ್ಯದ ಜಂಜಡಗಳೆಲ್ಲಾ ಮರೆಯಾಗಿ ಉಸಿರುಸಿರಿನಲ್ಲೂ ಹಸಿರಾಗೋ ಹವಣಿಕೆ.

ಕಡಲಲ್ಲಿ ಹುಟ್ಟಿ ತೇಲುತ್ತಾ ಬಂದು ಮಲೆನಾಡನ್ನೆಲ್ಲಾ ಆವರಿಸಿಕೊಳ್ಳುತ್ತಾ ಮುಂಗಾರಿನ ಚೆಲುವಿನ ಪಕ್ಷಿ ನೋಟವನ್ನು ಸವಿಯುವ ಮೋಡವೇ ಧನ್ಯ. ಚಾರ್ಮಾಡಿ ಘಾಟಿಯ ಹಾವಿನಂತೆ ಬಳಕುವ ರಸ್ತೆಯ ಇಕ್ಕೆಲಗಳಲ್ಲಿ ನಿಬಿಡವಾಗಿ ಬೆಳೆದ ಬೃಹತ್ ವೃಕ್ಷಗಳ ದಟ್ಟಾರಣ್ಯದ ಒಳಗೆ ತೂರೋ ವ್ಯರ್ಥ ಪ್ರಯತ್ನವನ್ನು ಮೋಡ ಮಾಡುತ್ತದೆ. ಪಚ್ಚೆಯುಟ್ಟ ಪ್ರಕೃತಿ ಮಾತೆಯ ಕೊರಳ ಮುತ್ತಿನ ಹಾರದಂತೆ ಉಕ್ಕೇರುವ ಜಲಪಾತಗಳ ಹಾಲ್ನೊರೆಯನ್ನು ಸಿಂಪಡಿಸಿಕೊಳ್ಳುತ್ತಾ ಮೋಡ ಮೇಲೇರುತ್ತದೆ. ಆಗುಂಬೆಯ ಹರಿದ್ವರ್ಣದ ಗಿರಿಕಂದರಗಳ ಸಾಲು, ಮಳೆಯ ಸ್ನಾನದಿಂದ ಮಡಿಯುಟ್ಟು ಪಾವನವಾಗೋದನ್ನ ಆನಂದಿಸುತ್ತದೆ. ತೀರ್ಥಹಳ್ಳಿಯಲ್ಲಿ ಬಳುಕುತ್ತಾ ಬಾಗುತ್ತಾ, ವೈಯಾರದಿಂದ ಚಿಮ್ಮುತ್ತಾ, ಸುರುಸುರುಳಿ ಸುಳಿಯುತ್ತಾ, ಬೆಳ್ನೊರೆ ಉಕ್ಕಿಸುತ್ತಾ, ಚಿನ್ನಾಟವಾಡೋ ತುಂಗೆ, ಕೆಮ್ಮಣ್ಣು ತುಂಬಿ, ಸೊಕ್ಕೇರಿ ತನ್ನ ಸೀಮೆಯನ್ನು ಮೀರಿ ಉಕ್ಕಿ ಹರಿಯುತ್ತಾ ರುದ್ರ ಸ್ವರೂಪಿಯಾಗಿ ರೂಪಾಂತರ ಹೊಂದುವುದನ್ನು ನೋಡಿ ಸೋಜಿಗಗೊಳ್ಳುತ್ತದೆ. ತೇಲುತ್ತಾ ಸಾಗೋ ಮೇಘರಾಶಿಗೆ ಕವಿಶೈಲವನ್ನು ತನ್ನ ಬಾಹುಬಂಧನದೊಳಗೆ ಬಳಸುವ ಯೋಗ. ಒಂದರ ಹಿಂದೊಂದು ತಲೆ ಎತ್ತಿರುವ ಹಚ್ಚಹಸಿರಿನ ಸಹ್ಯಾದ್ರಿಯ ಮಲೆಗಳ ಮಾಲೆ. ಕುಂದಾದ್ರಿಯ ಮೇಲಿಂದ ಕಣ್ಣಳತೆಯನ್ನೂ ಮೀರಿ ಹಬ್ಬಿರುವ ಅಡಿಕೆ ತೋಟಗಳ ನೀರವ ಶುಭ್ರತೆಯಲ್ಲಿ ಧ್ಯಾನಸ್ಥವಾಗುತ್ತದೆ. ಕೊಡಚಾದ್ರಿಯ ದಟ್ಟಡವಿಯ ಹಸಿರಿನ ವೈವಿಧ್ಯತೆಗೆ ನಿಬ್ಬೆರಗಾಗುತ್ತದೆ. ಕಡು ಹಸಿರು, ತಿಳಿ ಹಸಿರು, ಎಳೆ ಹಸಿರು, ಹಳದಿ ಮಿಶ್ರಿತ ಹಸಿರು...ಲೆಕ್ಕ ಹಾಕಲು ಶುರುವಿಟ್ಟರೆ, ಕಾದಂಬಿನಿ ರಾಶಿ ಸೋಲೋದು ಖಚಿತ. ಮಳೆಯ ಪ್ರಕೋಪಕ್ಕಂಜಿ ಗೂಡು ಸೇರುವ ಹಕ್ಕಿಗಳನ್ನು ಹಾಡುವಂತೆ ಮನವೊಲಿಸುತ್ತದೆ. ಗುಡುಗು ಸಿಡಿಲುಗಳ ಭಯದಿಂದ ಅಡಗಿರುವ ಪ್ರಾಣಿಗಳಿಗೆ ಧೈರ್ಯ ತುಂಬುತ್ತದೆ. ಸಿಬ್ಬಲಗುಡ್ಡೆಯ ಮೀನುಗಳ ಚಿನ್ನಾಟವನ್ನು ನೋಡುತ್ತಾ ಅಲ್ಲಿಯ ಪರಿಶುದ್ಧ ಪ್ರಶಾಂತತೆಯಲ್ಲಿ ಲೀನವಾಗುತ್ತದೆ. ಸಕಲೇಶಪುರದ ಹುಲ್ಲುಗಾವಲಿನಲ್ಲಿ ಎಳೆಯ ಕರುವಿನಂತೆ ಕುಣಿದು ಕುಪ್ಪಳಿಸುತ್ತದೆ. ಕೊಪ್ಪದ ಕಾಫಿ ತೋಟಗಳಲ್ಲಿ ಮೇಘ ಮಂದಾರವಾಗುತ್ತದೆ. ತಿಂಗಳುಗಟ್ಟಲೆ ಮಲೆನಾಡಿನಲ್ಲಿ ಗುಳೆ ನಿಲ್ಲುವ ಮೋಡ ಮಲೆನಾಡಿಗರ ಆದರಾತಿಥ್ಯವನ್ನೂ ಭರಪೂರ ಸವಿಯುತ್ತದೆ.

ಸ್ವರ್ಗದ ತುಣುಕಿನಂತಹ ಮಲೆನಾಡಿಗೆ ಮುಂಗಾರಿನ ಮಳೆಯ ಅಭಿಷೇಕ, ಕುಳಿರ್ಗಾಳಿಯ ಚಾಮರ, ಮೋಡದ ಹೂವಿನ ಹಾರ, ಸಿಡಿಲಿನ ಲಕ್ಷ ದೀಪೋತ್ಸವ, ಗುಡುಗಿನ ಗಂಟೆ, ಡಮರು, ಮದ್ದಲೆ: ಮಿಂಚಿನ ಮಂಗಳಾರತಿ. ಸುರಿವ ಮಳೆ ಪ್ರತಿಯೊಬ್ಬರ ಹೃದಯದಲ್ಲಿ ಪ್ರೀತಿಯ ಹೂವನ್ನು ಅರಳಿಸಲಿ. ಮುಂಗಾರಿನ ಸಿಡಿಲು ಪ್ರತಿಯೊಬ್ಬರಾಳದಲ್ಲಿರುವ ಪಶುತ್ವವನ್ನು ಸಿಡಿಸಿ ಹಾಕಲಿ. ಸೃಜನಶೀಲವಾದ ಜೀವನೋತ್ಸಾಹ ಎಲ್ಲರಲ್ಲೂ ಮಿಂಚಲಿ. ಧೀರೋದಾತ್ತತೆಯ ಪುರುಷ ಪ್ರಯತ್ನ ಗುಡುಗಿನಂತೆ ಘೀಳಿಡಲಿ. ಮಾನವೀಯತೆಯ ಮೋಡ ಮನುಕುಲವನ್ನು ಆವರಿಸಲಿ.